ಶ್ರೀ ಸಿದ್ದರಾಮಯ್ಯ.— ಮಾನ್ಯ ಅಧ್ಯಕ್ಷರೇ, ೭,೫೦೦ ದನಗಳನ್ನು ಹೊಂದಿರತಕ್ಕಂಥ ಸ್ಥಳಗಳಲ್ಲಿ ಒಂದು ಪಶುವೈದ್ಯ ಶಾಲೆಯನ್ನು ತೆರೆಯಬೇಕೆಂದು ಸರ್ಕಾರದ ನೀತಿಯಾಗಿರುತ್ತದೆ. ಈ ತಾಲ್ಲೂಕಿನಲ್ಲಿ ಒಂದು ಪಶುವೈದ್ಯ ಶಾಲೆಯನ್ನು ತೆರೆಯಬೇಕೆಂದು ಬಹಳ ದಿವಸಗಳಿಂದಲೂ ಬೇಡಿಕೆ ಇದ್ದರೂ ಸಿಬ್ಬಂದಿಯ ಕೊರತೆಯಿಂದಾಗಿ ಪಶುವೈದ್ಯ ಶಾಲೆಗಳನ್ನು ತೆರೆಯಲು ಸಾಧ್ಯವಾಗುತ್ತಿಲ್ಲ. ಈ ವರ್ಷ ಇನ್ನೂರು ಗ್ರಾಮಾಂತರ ಪಶುವೈದ್ಯ ಶಾಲೆಗಳನ್ನು ತೆರೆಯಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಯಾವ ತಾಲ್ಲೂಕಿಗೆ ಅತ್ಯಂತ ಅಗತ್ಯತೆ ಇದೆ ಆ ಭಾಗದಲ್ಲಿ ಪಶುವೈದ್ಯ ಶಾಲೆಯನ್ನು ತೆರೆಯಲಿಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

ಚುಕ್ಕೆ ಪ್ರಶ್ನೆ ೭೫೫ (೧೯೭೭)
ಸದಸ್ಯರು ಗೈರು ಹಾಜರಿ.

ಅಧ್ಯಕ್ಷರು.— ಚುಕ್ಕೆ ಪ್ರಶ್ನೆ ೭೯೬ (೧೯೧೩). ಈ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳೋಣ.

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಕೊಳವೆ ಬಾವಿಗಳು.

೧೯೫೫. ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬೀರೂರು ,— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲೆಯ ೧೯೮೩ರ ಹಿಂದೆ ಇದ್ದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ? ಹಾಗೂ ೧೯೮೩ ರಿಂದ ೧೯೮೫ ರವರೆಗೆ ಎಷ್ಟು ಕೊಳವೆ ಬಾವಿಗಳು ನಿರ್ಮಾಣವಾಗಿವೆ ?

ಆ) ೧೯೮೩ ರಿಂದ ಈಚೆಗೆ ಹೆಚ್ಚಿನ ಸಿಬ್ಬಂದಿಯನ್ನು ಸರ್ಕಾರದವರು ನೇಮಕಾತಿ ಮಾಡಿದ್ದಾರೆಯೆ ?

ಇ) ಜನಾರೋಗ್ಯ ಇಂಜಿನಿಯರಿಂಗ್ ಇಲಾಖೆಗೆ ಕ್ರಮವಾಗಿ ವಾಹನಗಳನ್ನು ಸರ್ಕಾರದವರು ಒದಗಿಸದಿರುವುದರಿಂದ ದುರಸ್ತಿ ಇತ್ಯಾದಿ ಕೆಲಸಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)—

ಅ) ೧) ಚಿಕ್ಕಮಗಳೂರು ಜಿಲ್ಲೆಯಲ್ಲಿ ೧೯೮೩ರ ಹಿಂದೆ ಇದ್ದ ಕೊಳವೆ ಬಾವಿಗಳ ಸಂಖ್ಯೆ ೨೬೩೧

೨) ೧೯೮೩ ರಿಂದ ೧೯೮೫ರ ಡಿಸೆಂಬರ್ ಕೊನೆಯವರೆಗೆ ನಿರ್ಮಾಣವಾದ ಕೊಳವೆ ಬಾವಿಗಳ ಸಂಖ್ಯೆ ೭೯೯.

ಆ) ಇಲ್ಲ.

ಇ) ಬಂದಿದೆ.

ಈ) ಕೈಪಂಪುಗಳ ರಿಪೇರಿ ಮತ್ತು ಉಸ್ತುವಾರಿ ಕೆಲಸ ಸರಿಯಾಗಿ ನಡೆಯುವ ದೃಷ್ಟಿಯಿಂದ ಚಿಕ್ಕಮಗಳೂರು ಜಿಲ್ಲೆಗೆ ಹೊಸದಾಗಿ ೨ ವಾಹನಗಳನ್ನು ಡಿಸೆಂಬರ್ ೮೫ರಲ್ಲಿ ಕೊಡಲಾಗಿದೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಬೋರ್‌ವೆಲ್‌ಗಳ ಸಂಖ್ಯೆ ಜಾಸ್ತಿಯಾಗಿರುತ್ತದೆ. ೧೯೮೩ ರಿಂದ ಈಚೆಗೆ ಇಷ್ಟೊಂದು ಜಾಸ್ತಿಯಾದರೂ ಇದಕ್ಕೆ ಅನುಗುಣವಾಗಿ ಸಿಬ್ಬಂದಿವರ್ಗವನ್ನು ಜಾಸ್ತಿ ಮಾಡಲಿಕ್ಕೆ ಆಗಲಿಲ್ಲ. ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಕೊಳವೆ ಬಾವಿಗಳನ್ನು ತೆಗೆಸಿದರೂ ಸಕಾಲದಲ್ಲಿ ಸಾಕಷ್ಟು ರಿಪೇರಿ ಆಗದಿದ್ದರೆ ಜನರಿಗೆ ತೊಂದರೆಯಾಗುವುದಲ್ಲದೆ ಸರ್ಕಾರ ಹಣವನ್ನು ಖರ್ಚುಮಾಡಿಯೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಹೆಚ್ಚಿನ ಸಿಬ್ಬಂದಿ ವರ್ಗವನ್ನು ಮತ್ತು ವಾಹನ ಸೌಕರ್ಯ ವ್ಯವಸ್ಥೆ ಮಾಡಿದರೆ ಈ ಕಾರ್ಯ ಕ್ರಮ ಇನ್ನೂ ಚೆನ್ನಾಗಿ ನಡೆಯುತ್ತದೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.